ಡಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **15.07.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು**:** ಪಿರ್ಯಾದುದಾರರ ಪರಃ ವಕೀಲರ ಮೂಲಕ ಃ

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಹಿಂದಿಯಲ್ಲಿ ಸಹಿ ಮಾಡುತ್ತೇನೆ ಆದರೆ ಓದಲು ಬರುವುದಿಲ್ಲ. ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನನಗೆ ಸೇರಿದಂತೆ 4-5 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಭತ್ತ, ರಾಗಿ, ಹುರುಳಿ ಬೆಳೆಗಳನ್ನು ಬೆಳೆಯುತ್ತೇನೆ. ನಾನು ವ್ಯವಸಾಯದಿಂದ ಆದಾಯವನ್ನು ಹೊಂದಿರುವುದಿಲ್ಲ. ನನಗೆ ಒಟ್ಟು 4 ಜನ ಮಕ್ಕಳಿರುತ್ತಾರೆ. ಸದರಿಯವರು ಸ್ವಂತ ವ್ಯವಹಾರವನ್ನು ಮಾಡುತ್ತಾರೆ. ನಾನು ಒಬ್ಬನೇ ಮನೆಯಲ್ಲಿ ಇದ್ದು, ಪ್ರತೀ ತಿಂಗಳು 4-5 ಸಾವಿರ ರೂಪಾಯಿ ಖರ್ಚು ಆಗುತ್ತದೆ.

2. ನನಗೆ ಸೇರಿದಂತೆ ಭ್ರಮರಾಂಭ ಚಿತ್ರ ಮಂದಿರ ಇತ್ತು ಎಂದರೆ ಸರಿ. ನಾನು ಪಿರ್ಯಾದುದಾರರಿಂಥ 1 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು 1994 ರಲ್ಲಿ ಪಿರ್ಯಾದುದಾರರಿಗೆ ಚಿತ್ರ ಮಂದಿರವನ್ನು ಭೋಗ್ಯ ಮಾಡಿದಾಗ ಚೆಕ್‌ನ್ನು ಕೊಟ್ಟಿರುತ್ತೇನೆ. ನಾನು ಮತ್ತು ಪಿರ್ಯಾದುದಾರರು ಇದ್ದ ಸಮಯದಲ್ಲಿ ಅವರಿಗೆ 4 ಚೆಕ್‌ಗಳನ್ನು ಕೊಟ್ಟಿರುತ್ತೇನೆ. ನಿಪಿ 1 ಚೆಕ್ ನಲ್ಲಿರುವ ಸಹಿ ನನ್ನದಾಗಿರುತ್ತದೆ. ನಾನು ಚೆಕ್‌ಗಳಲ್ಲಿ ಹಿಂದಿಯಲ್ಲಿ ಸಹಿ ಮಾಡಿರುತ್ತೇನೆ.

3. ಪಿರ್ಯಾದುದಾರರು ನನ್ನನ್ನು ಭೇಟಿ ಮಾಡಿ ಸಾಲದ ಮೊತ್ತವನ್ನು ವಾಪಸ್ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಸೃಷ್ಟಿ ಮಾಡಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2013 ರಲ್ಲಿ ಭ್ರಮರಾಂಭ ಚಿತ್ರ ಮಂದಿರ ಅಸ್ಥಿತ್ವದಲ್ಲಿ ಇತ್ತು ಎಂದರೆ ಸರಿಯಲ್ಲ. ಪಿರ್ಯಾದುದಾರರು ನೀಡಿದ ನೋಟೀಸ್‌ಗೆ ಪ್ರತ್ಯುತ್ತರ ನೀಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು**,** ಸಕಾರಣ ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.